ಇತ್ಯಾದಿಗಳಂತೆ ತಲಾ 0–3–0 ಕ್ಷೇತ್ರವನ್ನು ಮಂಜೂರು ಮಾಡಿದ್ದಾರೆ. ಇದನ್ನು ತಿಳಿದು ಆ ಬಗ್ಗೆ ವಿಧಾನಸಭೆಯಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಕೇಳಲಾಗಿ ಮಂತ್ರಿಗಳಿಂದ ಸರಿಯಾದ ಉತ್ತರ ಬರಲಿಲ್ಲ. ನಂತರ ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು 6–5–83ಕ್ಕೆ ಮೇಲೆ ಹೇಳಿದ ಮಂಜೂರಿಗಳನ್ನು ಹಂಗಾಮಿಯಾಗಿ ಸ್ಥಗಿತಗೊಳಿಸಿದರು. ಆದರೆ ಯಾವುದೇ ಪೂರ್ವ ಸೂಚನೆ ಇಲ್ಲದೆ ದಿನಾಂಕ 8–2–84ರಂದು ಜಿಲ್ಲಾಧಿಕಾರಿಗಳ ತಡೆ ಆಜ್ಞೆಯ ಆದೇಶವನ್ನು ಹಿಂದಕ್ಕೆ ಪಡೆದು ಮುಂದಿನ ಕ್ರಮಕ್ಕೆ ಭಟ್ಕಳ ತಹಶೀಲ್ದಾರರವರಿಗೆ ಆದೇಶ ನೀಡಿದ್ದಾರೆ. ಆದ್ದರಿಂದ ಆರೋಗ್ಯ ಖಾತೆಯ ಒಪ್ಪಿಗೆ ಪಡೆಯದೇ ಆ ಖಾತೆಯ ಸಂಬಂಧಪಟ್ಟ ಜಮೀನನ್ನು ಖಾಸಗಿಯವರಿಗೆ ನೀಡುವಂತಾಯಿತು. ಹಿಂದೆ ನಗರಸಭೆಯವರು ಈ ಸ್ಥಳವನ್ನು ಕೇಳಿಕೊಂಡರೂ ಸರ್ಕಾರ ಕೊಡಲು ಒಪ್ಪಲಿಲ್ಲ. ಇದರಲ್ಲಿ ದೊಡ್ಡ ಅವ್ಯವಹಾರ ಜಾಲವೇ ನಡೆದಿದೆ ಎಂದು ಕಾಣುತ್ತದೆ. ಆದುದರಿಂದ ಸರ್ಕಾರ ಈ ಭೂಮಿಯನ್ನು ಯಾರಿಗೂ ಕೊಡಬಾರದು ಮತ್ತು ಅವ್ಯವಹಾರವನ್ನು ತಡೆಗಟ್ಟಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಈಗಾಗಲೇ ತಾವು ಹೇಳಿರುವ ಪ್ರಕಾರ ಡಿಪ್ಯುಟಿ ಕಮಿಷನರ್ ಆರ್ಡರ್ ಮಾಡಿದ್ದಾರೆ. ತದನಂತರ ಪುನಃ ಗಲಾಟೆಯಾಗಿದೆ, ಆ ಆಜ್ಞೆ ಪ್ರಕಾರ ನಡೆದುಕೊಳ್ಳುತ್ತಾ ಇಲ್ಲ, ಅದನ್ನು ಯಾರಿಗೂ ಕೊಡಬಾರದು ಎಂದು ಅವರೇ ಹೇಳಿದ್ದಾರೆ. ಆ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಆದೇಶ ಕೊಡುತ್ತೇನೆ.

5. ವಿಷಯ : ತುಂಗಭದ್ರಾ ಬಲದಂಡೆ ನಾಲೆಯಿಂದ ಆಂಧ್ರಪ್ರದೇಶದ ಅಚ್ಚುಕಟ್ಟುದಾರರಿಗೆ ನೀರನ್ನು ಬಿಟ್ಟಿದ್ದರಿಂದ ಕರ್ನಾಟಕದ ಅಚ್ಚುಕಟ್ಟುದಾರರಿಗೆ ತೊಂದರೆ ಉಂಟಾಗಿರುವ ಬಗ್ಗೆ.

ಶ್ರೀ ಶಂಕರ ರೆಡ್ಡಿ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೆ, ತುಂಗಭದ್ರ ಬಲಭಾಗದ ಕೆಳಮಟ್ಟದ ಕಾಲುವೆಯ ನೀರು, ಆಂಧ್ರ ಮತ್ತು ಕರ್ನಾಟಕ ರಾಜ್ಯಗಳಿಗೆ ನೀರನ್ನು ಹಂಚುವ 'ಕಾಮನ್ ಡಿಸ್ಟ್ರಿಬ್ಯೂಟರಿಯಿಂದ' ವಿತರಣೆಯಾಗುತ್ತದೆ. ಆದರೆ, ಕರ್ನಾಟಕದ ಅಚ್ಚುಕಟ್ಟು ಪ್ರದೇಶಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಅನ್ಯಾಯಮಾಡಿ ಆಂಧ್ರ ಪ್ರದೇಶದ ಅಚ್ಚುಕಟ್ಟಿಗೆ ಪೂರ್ತಿ ನೀರನ್ನು ಬಿಟ್ಟಿರುವುದರಿಂದ ಕರ್ನಾಟಕದ ಭಾಗಕ್ಕೆ ನೀರು ಬರುತ್ತಾ ಇಲ್ಲ. ಸಾವಿರಾರು ಎಕರೆಗೆ ಇದರಿಂದಾಗಿ ನೀರು ಬರುತ್ತಿಲ್ಲ. ನೀರಿಲ್ಲದೆ ಕರ್ನಾಟಕದ ಭೂಮಿ ಹಾಳು ಬಿದ್ದಿರುವ ಬಗ್ಗೆ ಮತ್ತು ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ ಬಗ್ಗೆ ತನಿಖೆ ನಡೆಸಬೇಕು. ಸಂಬಂಧಪಟ್ಟವರನ್ನು ಅಲ್ಲಿಂದ ವರ್ಗಾಯಿಸಿ, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಮಗೆ ಬರತಕ್ಕಂಥ ನೀರಿನ ಭಾಗವನ್ನು ನಮಗೆ ಕೊಡಿಸಿ, ಸಂಬಂಧಪಟ್ಟ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದರೆ ಅವರ ಮೇಲೆ ತನಿಖೆ ನಡೆಸಬೇಕು. ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಲಕ್ಷ್ಯ ವಹಿಸಬೇಕು. ನಮಗೆ ಬರಬೇಕಾದಂಥ ನೀರನ್ನು ನಾವು ಕೇಳುತ್ತಾ ಇದ್ದೇವೆ. ವರ್ಷದಲ್ಲಿ ಒಂದು ಬೆಳೆಯಾದರೂ ಆಗಲಿಕ್ಕೆ ಅವಕಾಶ ಮಾಡಬೇಕು. ಭ್ರಷ್ಟ ಅಧಿಕಾರಿಗಳಿಂದ ಜನರಿಗೆ ತೊಂದರೆಯಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಯಾವ ಡಿಸ್ಟ್ರಿಬ್ಯೂಟರಿಯಲ್ಲಿ ಎಷ್ಟು ನೀರು ಹೋಗಬೇಕೋ ಅಷ್ಟು ನೀರನ್ನು ಬಿಡಿಸಲು ಆಜ್ಞೆ ಕೊಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ನಿಖರವಾದಂಥ ಆಪಾದಗಳಿದ್ದರೆ ಈಗಲೇ ವಿಚಾರಣೆ ಮಾಡಿಸಲಿಕ್ಕೆ ಒಪ್ಪಿಗೆ ಕೊಡುತ್ತೇನೆ. ಆಂಧ್ರ ಪ್ರದೇಶ ಮತ್ತು ಕರ್ನಾಟಕಕ್ಕೆ ಸಂಬಂಧಪಟ್ಟ ಕಾಮನ್ ಡಿಸ್ಟ್ರಿಬ್ಯೂಟರಿಯಲ್ಲಿ ನೀರನ್ನು ವಿತರಣೆ ಮಾಡತಕ್ಕ ಕಾಲದಲ್ಲಿ ಕೆಲವು ಲೋಪದೋಷಗಳಾಗಿವೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ನಿಖರವಾದಂಥ ಆಪಾದನೆಗಳನ್ನು ಹೇಳುವುದಾದರೆ ತನಿಖೆ ಮಾಡಲಿಕ್ಕೆ ಸಿದ್ಧನಿದ್ದೇನೆ. ಜೊತೆಗೆ ಇವತ್ತು ನೀರನ್ನು ವಿತರಣೆ ಮಾಡತಕ್ಕದ್ದರಲ್ಲಿ ಇರತಕ್ಕ ಲೋಪದೋಷಗಳನ್ನು ತಿದ್ದತಕ್ಕ ಬಗ್ಗೆ ಅವರು ಕೊಡತಕ್ಕ ಸಲಹೆಗಳನ್ನು ಸ್ವೀಕಾರಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ.

6. ವಿಷಯ ; ಕುಡಿಯುವ ನೀರಿನ ಅಭಾವದಿಂದ ಬಳ್ಳಾರಿ ನಗರದ ನಾಗರೀಕರಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ

ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಟೌನಿನಲ್ಲಿ ದಿನಕ್ಕೆ 4–5 ಗಂಟೆ ಕರೆಂಟ್ ಹೋಗುವುದರಿಂದ ನೀರು ಸರಬರಾಜು ಮಾಡಲಿಕ್ಕೆ ತೊಂದರೆಯಾಗಿದೆ. ಇಂಡಿಯಾ ದೇಶದಲ್ಲಿ ಬಳ್ಳಾರಿ ಬಿಸಿಲಿಗೆ ನಂಬರ್ ಒನ್ ಆಗಿದೆ. ಈ ವರ್ಷ ವಿಪರೀತ ಬಿಸಿಲು ಆದರೆ ನಮಗೆ ನೀರು ಸಿಗುತ್ತಾ ಇಲ್ಲ. 4–5 ಗಂಟೆ ಕರೆಂಟ್ ಹೋಗುವುದರಿಂದ ನೀರಿಗೆ ಕಷ್ಟವಾಗಿದೆ. ಕೆಲವು ಏರಿಯಾಗಳಲ್ಲಿ ಪೈಪ್‌ಲೈನ್ ಹಾಕಬೇಕು, ಅದನ್ನು ಇಲ್ಲಿಯವರೆಗೆ ಮಾಡಿಲ್ಲ. ವಿದ್ಯುಚ್ಛಕ್ತಿ ಕೊರತೆಯಿಂದ, ಬೇಸಿಗೆ ತಾಪದಿಂದ ಬಳ್ಳಾರಿ ನಗರ ತೀವ್ರ ನೀರಿನ ಅಭಾವಕ್ಕೆ ಒಳಗಾಗಿದ್ದು ಶೀಘ್ರದಲ್ಲೇ ಬದಲಿ

ವ್ಯವಸ್ಥೆಯನ್ನು ಮಾಡಿದ್ದಲ್ಲಿ ನಗರದಲ್ಲಿ ಕಾಲರಾ ಬೇನೆ ಹಾಗೂ ನೀರಿನ ಅಭಾವದಿಂದ ಜನ ಜಾನುವಾರುಗಳಿಗೆ ತುಂಬ ನಷ್ಟವಾಗುವುದೆಂಬ ಕಳಕಳಿ ಜನರಲ್ಲಿ ತುಂಬಿದೆ. ಈ ವಿಚಾರದಲ್ಲಿ ನಗರದಲ್ಲಿ ತೋಡಿರುವ ಕೊಳವೆ ಬಾವಿಗಳಿಂದ ನೀರನ್ನು ಎತ್ತುವ ವ್ಯವಸ್ಥೆ ಹಾಗೂ ಅಗತ್ಯವಿರುವ ಕಡೆಗಳಿಗೆ ನೀರು ಸರಬರಾಜು ಮಾಡುವುದು ಅಗತ್ಯವಿದೆ. ಕೆಲವು ಪರಿಯಾಗಳಲ್ಲಿ ನೀರೇ ಬರುವುದಿಲ್ಲ. ಅಂತಹ ಕಡೆ ಏನಾದರೂ ಮಾಡಿ ನೀರು ಸರಬರಾಜು ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರು ಬಳ್ಳಾರಿಯ ಕೆಲವು ಪ್ರದೇಶಗಳಲ್ಲಿ ನೀರಿನ ಅಭಾವವಿದೆಯೆಂದು ಹೇಳಿದ್ದಾರೆ. ಅದನ್ನು ವಿಚಾರ ಮಾಡಿ ತಕ್ಷಣ ಕ್ರಮ ತೆಗೆದುಕೊಳ್ಳಲಿಕ್ಕೆ ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ನಗರಾಡಳಿತ ಮಂತ್ರಿಗಳ ಮಾತಿಗೆ ಒಂದು ಮಾತನ್ನು ಸೇರಿಸಲಿಕ್ಕೆ ಬಯಸುತ್ತೇನೆ. ಬಳ್ಳಾರಿಯಲ್ಲಿ ಕುಡಿಯುವ ನೀರಿಗೆ ತೀವ್ರ ಅಭಾವವಿದೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತುಂಟು. ಸ್ವಲ್ಪ ಹಣ ಖರ್ಚುಮಾಡಿದರೆ ಈಗಿರತಕ್ಕ ನೀರಿನ ಸಂಪೂರ್ಣವಾದಂಥ ಲಾಭ ಪಡೆದುಕೊಳ್ಳಬಹುದು ಎಂದು ಗೊತ್ತಾಗಿದೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸುತ್ತೇನೆ. ಬೇಸಿಗೆ ಕಾಲದಲ್ಲಿ ಬಳ್ಳಾರಿ ಶಹರದಲ್ಲಿ ವಾಸಮಾಡತಕ್ಕ ಜನರಿಗೆ ನೀರಿನ ಅಭಾವ ಉಂಟಾಗದ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

7. ವಿಷಯ : ಭದ್ರಾವತಿಯ ಗುಣಶೇಖರ್ ಎಂಬುವನ ಮೇಲೆ ದಿನಾಂಕ 18-3-1984ರಂದು ನಡೆದ ಹಲ್ಲೆ ಹಾಗೂ ಆತನ ಕೊಲೆಯಾಗಿರುವ ಅನುಮಾನದ ಬಗ್ಗೆ

ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೆ, ತಾರೀಖು 18-3-1984 ರಂದು ಭಾನುವಾರ ಮಧ್ಯಾಹ್ನ 12 ಗಂಟೆಯಲ್ಲಿ ಮೈಸೂರು ಪೇಪರ್ ಮಿಲ್ಲಿನ ಗುಣಶೇಖರ ಎಂಬ ಕಾರ್ಮಿಕ, ಸಣ್ಣ ಹಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನದ ಜಾತ್ರೆ ನಡೆದಾಗ ಆ ಜಾತ್ರೆಗೆ ಈತ ಮತ್ತು 3-4 ಜನ ಹುಡುಗರು ಹೋಗಿ ಒಂದು ಕಡೆ ಕುಳಿತು ಕಡ್ಲೆಪುರಿ ತಿನ್ನುತ್ತಿದ್ದಾಗ ಆ ಹುಡುಗರಲ್ಲೇ ಸಣ್ಣ ಘರ್ಷಣೆಯಾಗಿದೆ. ಆ ಘರ್ಷಣೆಯಾದ ಮೇಲೆ ಸುಮಾರು 50-60 ಜನ ಒಟ್ಟಿಗೆ ಬಂದು ಈ ಹುಡುಗನನ್ನು ಹೊಡೆದಿದ್ದಾರೆ, ಎಲ್ಲಿ ಹೋದರೂ ಬಿಡದೆ ಹೊಡೆದಿದ್ದಾರೆ. ಗುಣಶೇಖರ ಎನ್ನತಕ್ಕ ಹುಡುಗ ಹೊಳೆಗೆ ಹಾರಿಕೊಂಡಿದ್ದಾನೆ. ಹೊಳೆಗೆ ಹಾರಿದರೂ ಬಿಟ್ಟಿಲ್ಲ, ಕಲ್ಲುಗಳನ್ನು ಹೊಡೆದಿದ್ದಾರೆ. ಅವನ ಮುಖಕ್ಕೆ ಏಟುಬಿದ್ದು ಮುಳುಗಿ ಹೋದ. ಮಾರನೇ ದಿವಸ ಒಂದು ಗಂಟೆಗೆ ಹೆಣ ಮೇಲೆ ಬಂತು. ತಂದೆ ತಾಯಿಗಳು ರಾತ್ರಿಯೆಲ್ಲಾ ಕಾದಿದ್ದು ಹೆಣ ಬಂದ ಮೇಲೆ ಆಸ್ಪತ್ರೆಗೆ ಸಾಗಿಸಿದರು, ನಂತರ ಶವ ಸಂಸ್ಕಾರ ಮಾಡಿದರು. ಇನ್ನೊಬ್ಬ ಹುಡುಗನಿಗೆ ಬಲವಾದ ಪೆಟ್ಟು ಬಿದ್ದಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಪೇಪರ್ ಮಿಲ್‌ನಲ್ಲಿ ಕೆಲಸಮಾಡಿ ಜೀವನ ಮಾಡುತ್ತಿದ್ದ 20 ವರ್ಷ ವಯಸ್ಸಿನ ಹುಡುಗನನ್ನು ಈ ರೀತಿ ವಿನಾಕಾರಣ ಹೊಡೆದು ಕೊಲೆ ಮಾಡಿರುವುದರಿಂದ ಯಾರು ಈ ರೀತಿ ಮಾಡಿದ್ದಾರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಮತ್ತು ಆ ಕುಟುಂಬಕ್ಕೆ ತಾವು ಸಾಧ್ಯವಾದಷ್ಟು ಪರಿಹಾರವನ್ನು ಒದಗಿಸಬೇಕು ಮತ್ತು ಚಿಕಿತ್ಸೆ ಪಡೆಯತಕ್ಕ ಹುಡುಗನಿಗೆ ಸರಿಯಾದ ಚಿಕಿತ್ಸೆ ದೊರಕಿಸಿ ಪರಿಹಾರ ಕೊಡುವುದಕ್ಕೆ ಸರ್ಕಾರ ಸಹಾಯ ಮಾಡಬೇಕು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈ ಸುದ್ದಿ ನಮಗೆ ಈಗತಾನೇ ಬಂದಿದೆ. ಈಗಲೆ ಏನೂ ಹೇಳಲಿಕ್ಕೆ ಆಗುವುದಿಲ್ಲ. ಎಸ್.ಪಿ.ಯವರಿಗೆ ಹೋಗಿ ತನಿಖೆ ಮಾಡಬೇಕು ಎಂದು ಹೇಳಿದ್ದೇನೆ. ಕೊಲೆಯಾದ ಕುಟುಂಬಕ್ಕೆ ಪರಿಹಾರ ಕೊಡಬೇಕು ಅಂದರೆ, ಎಲ್ಲಾ ಕೇಸುಗಳಲ್ಲಿ ಪರಿಹಾರ ಕೊಡುವುದು ಕಷ್ಟವಾಗುತ್ತದೆ. ಯಾವ ಕಾರಣಕ್ಕೆ ಕೊಲೆ ಆಗಿದೆಯೋ ಗೊತ್ತಿಲ್ಲ. ಗಾಯಗೊಂಡವರಿಗೆ ಉಪಚಾರ ಮಾಡಲಿಸಕ್ಕೆ ನಾನು ಹೇಳುತ್ತೇನೆ.

1-30 p.m.

9. ವಿಷಯ : ದಿನಾಂಕ 30-3-1984ಕ್ಕೆ ಪೂರ್ವದಲ್ಲಿ ಕಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕವಾದ ಹೈಸ್ಕೂಲ್ ಶಿಕ್ಷಕರನ್ನು ಮುಂದುವರಿಸುವ ಬಗ್ಗೆ

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಸನ್ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕದಲ್ಲಿರತಕ್ಕಂತಹ ಪ್ರೌಢಶಾಲೆಗಳಲ್ಲಿ ಕೆಲಸ ಮಾಡತಕ್ಕಂತಹ ಶಿಕ್ಷಕರಲ್ಲಿ ತಿಂಗಳಿಗೆ 100 ರೂಪಾಯಿಗಳ ಮಾಶಾಸನ ಸಿಕ್ಕತಕ್ಕಂತವರೂ ಇದ್ದಾರೆ. ಅವರನ್ನು ಮನೆಗೆ ಕಳುಹಿಸುವ ವ್ಯವಸ್ಥೆ ನಡೆಯುತ್ತಿದೆ. ಇದರಲ್ಲಿ ಕೆಲವರು ಮದುವೆಯಾದವರೂ ಇದ್ದಾರೆ. ಅವರಿಗೆ ಇದರಿಂದ ತುಂಬಾ ತೊಂದರೆಯಾಗು